ಹಾಕಿ ದಮ್ಮು ಬಿಟ್ಟು ನೂಕಬೇಕು ಸರೂ. ಇದು ನೀವು ಕಾಣುವಷ್ಟು ಸಲೀಸಲ್ಲ ಕಾಣಿ. ಸೊಂಟ ರಪ್ಪ ಬಿದ್ದೋಗುತ್ತೆ. ರಾತ್ರಿ ಬೆಚ್ಚ ಬಣ್ಣದ ನೀರು ಇಳಿದೇ ಇದ್ರೆ ನಿದ್ದೆ ಹತ್ತಲ್ಲ' ಎಂದು ಹಲ್ಲುಕಳೆದು ಹೇಳುತ್ತಲೇ ಇದ್ದರು. 'ಎಷ್ಟುಬಣ್ಣದ ನೀರು'? ಎಂದಾಗ ಮುಷ್ಟಿ ಮುಚ್ಚಿ ಅರ್ಧ ಅಡಿಯ ಅಳತೆ ತೋರಿಸಿ 'ಇಷ್ಟೇ'! ಎಂದು ಗಹಗಹಿಸಿ ನಕ್ಕರು.

ಓಸ್ಪ್ರೈ, (ಮೀನು ಡೇಗೆ) ಎಂಬ ಹದ್ದು ಮೀನು ಹಿಡಿಯುವುದರಲ್ಲಿ ನಿಷ್ಣಾತ ಎಂದು ಹೆಸರು ಮಾಡಿದೆ. ಅದರ ಪಟ ತೆಗೆಯಬೇಕೆಂಬುದು ನಮ್ಮ ಆ ದಿನದ ಪ್ರಮುಖ ಗುರಿಯಾಗಿತ್ತು. ಸಾಧ್ಯವಾದಷ್ಟು ಅದರ ಕಡೆಗೆ ಹೆಚ್ಚು ಗಮನ ಕೊಡುವಂತೆ ನಾವಿಕನಿಗೆ ಮನವಿ ಮಾಡುತ್ತಲೇ ಇದ್ದೆವು. ತನ್ನ ಶಿಕಾರಿಯನ್ನು ಬೆನ್ನಟ್ಟಿ ಮಿಂಚಿನಂತೆ ಹಿಡಿತ ಸಾಧಿಸುವ ಮೀನುಡೇಗೆ ಹದ್ದು ನೋಡಲು ಕೂಡ ಅಷ್ಟೇ ಸುಂದರ. ಮೀನನ್ನು ತನ್ನ ಚೂಪಾದ ಉಗುರಗಳಲ್ಲಿ ಅದು ಹೆಕ್ಕಿ ಹಿಡಿದರೆ ಕಥೆ ಮುಗಿಯಿತೆಂದೇ ಅರ್ಥ. ಮೀನು ನುಣುಚಿ ಹೋಗುವ ಮಾತಂತೂ ಬಿಲ್ ಕುಲ್ ಖತಂ. ತನ್ನ ಪ್ರಬಲವಾದ ಎರಡೂ ಪಂಜಗಳ ಸಹಾಯದಿಂದ ಮೀನನ್ನು ಈಟಿಯಲ್ಲಿ ಚುಚ್ಚಿದಂತೆ ಭದ್ರ ಹಿಡಿದು ಆಗಸದಲ್ಲಿ ಹಾರುತ್ತದೆ. ಸಾವಕಾಶವಾಗಿ ಒಂದು ಕಡೆ ಕೂತು ಮೊದಲು ತಲೆಯನ್ನು ಸೀಳಿ ನಂತರ ಉಳಿದ ಭಾಗ ಪೂರೈಸುತ್ತದೆ. ಕೆಲವೊಮ್ಮೆ ಹಾರುಹಾರುತ್ತಲೇ ಮೀನನ್ನು ಆಗಸದಲ್ಲೇ ಹಾರಿಸಿ ಬಾಯಿ ಕಳೆದು ನುಂಗಿ ಬಿಡುತ್ತದೆ. ಯಾವ ಕಾರಣಕ್ಕೂ ತನ್ನ ಶಿಕಾರಿ ಸಾಮಾಗ್ರಿಯನ್ನು ಈ ಹದ್ದು ಆಯತಪ್ಪಿಸಿ ಕೆಳಗೆ ಬೀಳಿಸುವುದಿಲ್ಲ. ಅಷ್ಟು ನಿಖರ ಅದರ ಚಾಕುವಿನಂತಹ ಕಾಲಿನ ಉಗುರುಗಳು.

ಆದರೆ, ಇದರ ನಡುವೆ ಬಲು ಅಪರೂಪದ, ನಾವು ನಿರೀಕ್ಷಿಸದ ಮತ್ತೊಂದು ಹದ್ದು ಸಿಕ್ಕಿತು. ಅದೇ ಬಿಳಿ ಎದೆಪಟ್ಟಿಯ ಸಮುದ್ರ ಹದ್ದು (ವೈಟ್ ಬಿಲ್ಲೀಡ್ ಸೀ ಈಗಲ್) ಇದನ್ನು ಕಂಡು ಚಿತ್ರಿಸಲು ನಾಲ್ಕು ದಿನದಿಂದ ಡೇರೆ ಹೊಡೆದಿದ್ದ ಮುಂಬಯಿಯ ಒಂದು ತಂಡಕ್ಕೆ ಇದರ ಮುಖ ದರುಶನವೂ ಆಗಿರಲಿಲ್ಲ. ನಮಗಿಂತ ಮೊದಲೇ ಮತ್ತೊಂದು ದೋಣಿಯಲ್ಲಿದ್ದ ಅವರು ಹುಡುಕಿ ಹತಾಶರಾಗಿ ಹಿಂತಿರುಗಿದ್ದರು. ಅವರು ಹೊರಟು ಹೋದ ದಾರಿಯಲ್ಲೇ ನಮಗಿದು ಅಚಾನಕ್ಕಾಗಿ ಸಿಕ್ಕಿತು. ಇದೂ ಕೂಡ ಬೇಟೆಯಲ್ಲಿ ಓಸ್ಪ್ರೈ ಹದ್ದುವಿನಷ್ಟೇ ಪ್ರಬಲ ಶಿಕಾರಿಗಾರ.



ಬ್ರಾಮಿಣಿ ಕೈಟ್, ರಿವರ್ ಟರ್ನ್, ಪ್ಲೋವೇರ್ಸ್, ಓಸ್ಟರ್ ಕ್ಯಾಚರ್ ಹೀಗೆ ವಿವಿಧ ಆಂಗ್ಲ ನಾಮಾವಳಿಯ ಹಕ್ಕಿಗಳ ನೋಡಿದೆವು. ನೀರಿನ ಹಕ್ಕಿಗಳಲ್ಲಿ ಹೆಚ್ಚಿನವು ಬಿಳಿಬಣ್ಣದ್ದೇ ಆಗಿರುತ್ತವೆ. ಕೊಕ್ಕು ಹಳದಿ ಇಲ್ಲವೇ ಕೆಂಪು ವರ್ಣ, ಎದೆಯ ಭಾಗ ಕಂದು, ರೆಕ್ಕೆಯ ಕೆಲ ಭಾಗ ಕಪ್ಪು ಎನ್ನುವುದು ಬಿಟ್ಟರೆ ಉಳಿದಂತೆ ಶ್ವೇತ ವರ್ಣವೇ ಪ್ರಾಬಲ್ಯವಾಗಿರುತ್ತದೆ. ಒಟ್ಟಿಗೆ ಒಮ್ಮೆಲೇ ರಾಶಿರಾಶಿ ಖಗಗಳ ನೋಡುವ ಇರಾದೆ ಇದ್ದವರು ಕುಂದಾಪುರದ ಈ ಜಾಗೆಗೆ ಹೋಗಬಹುದು. ನೆನೆಸಿಕೊಂಡರೆ ಈ ಭುವಿಯ ಮೇಲೆ ಬಾಳುವ ಒಂದೊಂದು ಜೀವರಾಶಿಗೂ ಒಂದೊಂದು ಬಗೆಯ ಆಹಾರ ಕ್ರಮ, ಬದುಕುವ ವೈವಿಧ್ಯತೆ, ಶಿಕಾರಿಯ ಶಿಕ್ಷಣ, ವಿಶಿಷ್ಟ ಗುಣಗಳನ್ನು ಕಲಿಸಿರುವ ಈ ಪ್ರಕೃತಿಯ ತಿಳಿವಳಿಕೆಯೇ ಒಂದು ವಿಸ್ಮಯ. ●